# ಆಹಾ ಸುದ್ದಿ!

★ ಸಸಿತೋಟ




ಇಟಲಿ ಭಾಷೆಯಲ್ಲಿ ಜೆಲ್ಯಾಟೊ ಎಂದರೆ ಐಸ್‌ಕ್ರೀಮ್. ಇದರ ತಯಾರಿಕೆ ಕಲಿಸಲು ಅಲ್ಲಿ 'ಜೆಲ್ಯಾಟೊ ವಿಶ್ವವಿದ್ಯಾನಿಲಯ'ವೇ ಶುರುವಾಗಿದೆಯಂತೆ. ಹಾಲು, ಕ್ರೀಮ್, ಸಕ್ಕರೆ, ಪರಿಮಳಕ್ಕೆ ಹಣ್ಣು ಸೇರಿಸಿ ತಯಾರಿಸುವ ಜೆಲ್ಯಾಟೊ ಯಂತ್ರವನ್ನು ವಿದ್ಯಾರ್ಥಿಗಳಿಗೆ ಅರ್ಧ ಬೆಲೆಗೆ ಮಾರುತ್ತಾರಂತೆ. ಉದ್ಯಮ ಬಂದ್ ಆದರೆ ಯಂತ್ರವನ್ನೂ ವಾಪಸ್ ಮಾಡಬಹುದು. ಜೊತೆಗೆ ವಿದ್ಯಾರ್ಥಿವೇತನ. ಇಷ್ಟೆಲ್ಲಾ ಆಕರ್ಷಣೆ ಇದ್ದ ಮೇಲೆ ಜೆಲ್ಯಾಟೊ ತರುವ ಲಾಭದ ರುಚಿಗೆ ಮಾರು ಹೋಗದವರು ಯಾರು?

ಕಳುವಾಗಿದೆಯಾ ಅಥವಾ ಬೇರೆ ಯಾವುದಾದರೂ ಅಪರಾಧ ಘಟಿಸಿದೆಯಾ? ಆದರೆ ಮಜಬೂತು ನಾಯಿಗಳನ್ನು ಹಿಡಿದುಕೊಂಡು ಈತ ಕಾಯುತ್ತಿರುವುದು ಅವುಗಳಿಗೆ ಆಶೀರ್ವಾದ ಕೊಡಿಸಲು. ಬ್ರೆಜಿಲ್‌ನಲ್ಲಿ ಸಾಕುಪ್ರಾಣಿಗಳಿಗೆ ಆಶೀರ್ವಾದ ಮಾಡಿಸುವುದೂ ಒಂದು ಸಂಪ್ರದಾಯವಂತೆ. ಅದೂ ಸರಿ. ತಾವಷ್ಟೇ ದೇವರ ಕೃಪೆಗೆ ಪಾತ್ರರಾದರೆ ಸಾಕೇ? ಪ್ರೀತಿಯ ಸಾಕುಪ್ರಾಣಿಗಳೂ ಸ್ವರ್ಗ ಸೇರುವುದು ಬೇಡವೇ?



ಅಮೆರಿಕಾದ ಪೆನ್ಸಿಲ್ವೇನಿಯಾದ 'ಸ್ಟ್ಯಾಂಟನ್ ಟೈಮ್ಸ್' ಪತ್ರಿಕಾ ಕಚೇರಿಗೆ ಹೊಸ ವರ್ಷಾಚರಣೆ ಸಂದರ್ಭದಲ್ಲಿ ಕ್ಯಾಲೆಂಡರ್ ಪಾರ್ಸೆಲ್ ಬಂತು. ಆದರೆ ಕ್ಯಾಲೆಂಡರ್ 1950ರದ್ದು. 63 ವರ್ಷಗಳ ಹಿಂದಿನಿಂದ ಅಂಚೆ ಕಚೇರಿಯಲ್ಲಿ ಬಿದ್ದಿದ್ದ ಕ್ಯಾಲೆಂಡರ್ ಅನ್ನು ವಿಳಾಸದಾರರಿಗೆ ತಲುಪಿಸಿದ್ದಕ್ಕೆ ಇಲಾಖೆಯವರು ಖುಷಿಯಾದರು. ಆದರೆ ಬಹು ಹಿಂದೆಯೇ ಮರಣ ಹೊಂದಿದ ವಿಳಾಸದಾರ ಪತ್ರಿಕೆಯ ಜನರಲ್ ಮ್ಯಾನೇಜರ್ ನೆನಪಿನಿಂದ ಪತ್ರಿಕೆ ಕಚೇರಿಯಲ್ಲಿ ವಿಷಾದ ಆವರಿಸಿತಂತೆ. ಹೊಸ ವರ್ಷದ ಸಂಭ್ರಮವನ್ನು ಇಲಾಖೆಯವರು ಈ ರೀತಿ ಹಾಳು ಮಾಡಬಾರದಿತ್ತು.

ಅಮೆರಿಕಾದ ಕಾನ್ಸಾಸ್‌ನಲ್ಲಿ ಸಲಿಂಗಿ ಮಹಿಳಾ ದಂಪತಿ ಬೇಡಿಕೆ ಮೇರೆಗೆ 46ರ ವಿಲಿಯಮ್ಸ್ ವೀರ್ಯದಾನ ಮಾಡಿದ. ಒಪ್ಪಂದಕ್ಕೂ ಸಹಿ ಹಾಕಿಸಿಕೊಂಡ. ಹೆಣ್ಣು ಮಗು ಹುಟ್ಟಿ ಮೂರು ವರ್ಷಗಳಾದ ಮೇಲೆ ಅಲ್ಲಿಯ ಆಡಳಿತ ಆ ಹೆಣ್ಣುಮಗುವನ್ನು ಬೆಳೆಸಲು ಅಗತ್ಯವಿರುವ ಖರ್ಚು ನೀಡುವಂತೆ ವಿಲಿಯಮ್ಸ್ ಮೇಲೆ ಕಾನೂನು ಸಮರ ಹೂಡಿದೆ. ದಂಪತಿ ಹಣ ಬೇಡ ಎಂದು ಹೇಳುತ್ತಿದ್ದರೂ ಆಡಳಿತ ಕೇಳುತ್ತಿಲ್ಲವಂತೆ. ದೇವರು ಕೊಟ್ಟರೂ ಪೂಜಾರಿ ಬಿಡ ಎಂಬಂತಾಗಿದ್ದು, ಒಳ್ಳೆಯ ಕೆಲಸ ಮಾಡಿದರೆ ಶಿಕ್ಷೆ ತಪ್ಪಲ್ಲ ಎಂದು ವಿಲಿಯಮ್ಸ್ ಹೊಸ ಗಾದೆ ರಚಿಸಿಕೊಂಡು ಕೋರ್ಟ್‌ಗೆ ಓಡಾಡುತ್ತಿದ್ದಾನಂತೆ.



ಸಿಂಗಪುರದಲ್ಲಿ ಹೆದ್ದಾರಿ ನಿರ್ಮಾಣಕ್ಕೆ ಪ್ರಾಚೀನ ಸಮಾಧಿಗಳನ್ನೆಲ್ಲ ಎತ್ತಂಗಡಿ ಮಾಡಿ ಭಾರಿ ಗದ್ದಲ ಎದ್ದಿತ್ತು. ಈಗ ಚೀನಾದಲ್ಲಿ ದೊಡ್ಡದೊಂದು ಕಟ್ಟಡ ನಿರ್ಮಾಣ ಸ್ಥಳದ ಮಧ್ಯೆ ನಾಲ್ಕು ಪುರಾತನ ಸಮಾಧಿಗಳು ಮುಗುಮ್ಮಾಗಿ ಕೂತಿವೆ. ಅದೂ 10 ಮೀಟರ್ ಎತ್ತರ, 10 ಚ.ಮೀಟರ್ ವಿಸ್ತಾರವಿರುವ ಸಮಾಧಿಗಳ ಸ್ಥಳಾಂತರಕ್ಕೆ ಅವರ ಕುಟುಂಬದವರು ಶುಭ ದಿನಕ್ಕಾಗಿ ಕಾಯುತ್ತಿದ್ದಾರಂತೆ. ನಮ್ಮಲ್ಲಾದರೆ ಅವುಗಳನ್ನು ಹಾಗೇ ಬಿಟ್ಟು, ನಂತರ ಯಾತ್ರಿ ಸ್ಥಳವನ್ನಾಗಿ ಮಾಡಿ... ಪಾಪ, ಚೀನಿಯರು ನಮಗಿಂತ ಬಹಳ ಹಿಂದಿದ್ದಾರೆ!



ಮೆಕ್ಸಿಕೋದ ಒಟುಂಬಾದಲ್ಲಿ ಕತ್ತೆ ಕಳುವಾಯಿತು. ಕಳ್ಳ ಸಿಕ್ಕಿದ. ಕತ್ತೆಯೂ ಸಿಕ್ಕಿತು. ಪೊಲೀಸರು ಬರುವವರೆಗೆ ಕಳ್ಳ ಓಡಿಹೋದರೆ! ಕಳ್ಳನ ಹಿಂದೆ ಕತ್ತೆಯೂ ಹೋದರೆ... ಕಳುವಿನ ಮಾಲಿನ ಜೊತೆಗೇ ಅವನನ್ನೂ ಪೊಲೀಸರೆದುರು ಹಾಜರುಪಡಿಸಿದ್ದು ಹೀಗೆ. ಅದಕ್ಕೂ ಮೊದಲು ಜನರಿಂದಲೇ ಗೂಸಾ. ಆಮೇಲೆ ಕತ್ತೆಯ ಒದೆತ. ಕತ್ತೆಯ ಬದಲು ಆನೆಯ ಕಳವಿಗೆ ಕೈ ಹಾಕಿದ್ದರೆ...! ಏನೇ ಆದರೂ ಕತ್ತೆಗೆ ಈ ಸ್ಥಿತಿ ಬರಬಾರದಿತ್ತು.